ಪ್ರತಿಬಾರಿ ಟೂರಿನಿಂದ ಬರುವಾಗ ಒಂದು ಕತೆಯೋ ಕಾದಂಬರಿಯೋ ತಲೆಯೊಳಗೆ ತುಂಬಿಕೊಂಡು ಬರುತ್ತೀರಾ ಎಂದು ಕೇಳಿದರೆ ಅಯ್ಯೋ, ಅದನ್ನೇನು ಕೇಳ್ತೀರಿ, ಸಾಮರ್‌ಸೆಟ್ ಮಾಮ್ ಗೊತ್ತಲ್ಲ ನಿಮಗೆ, 'ರೇಜರ್ಸ್ ಎಜ್' ಕಾದಂಬರಿ ಬರೆದವ, ಅವನಿಗೆ ಗಡ್ಡ ಹೆರೆಯುವಾಗಲೇ ಐಡಿಯಾಗಳು ಬರುತ್ತಿದ್ದವಂತೆ ಗೊತ್ತಾ ಎನ್ನುತ್ತಾರೆ ಕೆ.ಟಿ. ಗಟ್ಟಿ! ಸಾಮರ್‌ಸೆಟ್ ಬರೆದ 'ದ ಸಮ್ಮಿಂಗ್ ಅಪ್' ಅವರ ಫೇವರಿಟ್ ಕೃತಿ ಅದನ್ನು ಬಹಳ ಸಲ ಓದಿದ್ದೇನೆ ಎನ್ನುವ ಗಟ್ಟಿಯವರು ಅವನ ಎಲ್ಲಾ ಕೃತಿಗಳನ್ನು ಇಷ್ಟಪಡುತ್ತಾರೆ. ಪ್ರತಿಬಾರಿ ಟೂರಿನಿಂದ ಬರುವಾಗ ಒಂದು ಕತೆಯೋ ಕಾದಂಬರಿಯೋ ತಲೆಯೊಳಗೆ ತುಂಬಿಕೊಂಡು ಬರುತ್ತೀರಾ ಎಂದು ಕೇಳಿದರೆ ಅಯ್ಯೋ, ಅದನ್ನೇನು ಕೇಳ್ತೀರಿ, ಸಾಮರ್‌ಸೆಟ್ ಗೊತ್ತಲ್ಲ ನಿಮಗೆ, 'ರೇಜರ್ಸ್ ಎಜ್' ಕಾದಂಬರಿ ಬರೆದವ, ಅವನಿಗೆ ಗಡ್ಡ ಹೆರೆಯುವಾಗಲೇ ಐಡಿಯಾಗಳು ಬರುತ್ತಿದ್ದವಂತೆ ಗೊತ್ತಾ ಎನ್ನುತ್ತಾರೆ ಗಟ್ಟಿ! ಸಾಮರ್‌ಸೆಟ್ ಬರೆದ 'ದ ಸಮ್ಮಿಂಗ್ ಅಪ್' ಅವರ ಇಷ್ಟದ ಕೃತಿ. ಅದನ್ನು ಬಹಳ ಸಲ ಓದಿದ್ದೇನೆ ಎನ್ನುವ ಗಟ್ಟಿಯವರು ಅವನ ಎಲ್ಲಾ ಕೃತಿಗಳನ್ನು ಇಷ್ಟಪಡುತ್ತಾರೆ.

ನಿಮ್ಮ ಕ್ರಿಯೆಯಲ್ಲಿ, ನಿಮ್ಮ ಕೆಲಸದಲ್ಲಿ ನೀವು ಕಾಣ್ಬೇಕು.

ಜನಪ್ರಿಯ ಅಂತ ಎಲ್ರೂ ಹೇಳ್ತಿದ್ರು. ಸಾಮಾನ್ಯ ಜನ ಜನಪ್ರಿಯ ಅಂತ ಹೇಳುವಾಗ ಅವರು ಇಷ್ಟಪಟ್ಟ ಲೇಖಕ ಅನ್ನುವ ಅರ್ಥದಲ್ಲಿ ಹೇಳ್ತಾರೆ. ಉಳಿದವರು ಜನಪ್ರಿಯ ಅಂತ ಹೇಳಿದ್ರೆ ಸ್ವಲ್ಪ ಬೇರೆ. ಮೌಲ್ಯ ಉಳ್ಳವ, ಬರಹಗಾರ. ಅನಂತಮೂರ್ತಿ ಅಂಥವರು, ಅವರು ಇವರು ಇದ್ದಾರೆ. ಮತ್ತೆ ಇವರು ಜನಪ್ರಿಯ ಬರಹಗಾರರು ಅಂತ ವರ್ಗೀಕರಣ ಇದೆ. ಅದಕ್ಕೆ ಕಾರಣ ಏನಾಯ್ತು ಅಂದ್ರೆ, ಮೊದಲ ಕಾದಂಬರಿಯಲ್ಲಿ, ಅದು ಬಹಳ ಪ್ರಸಿದ್ಧ ಆಗಿ ಹೋಯ್ತು. ನನ್ನ 'ಶಬ್ದಗಳು' ಯಾಕೆ ಕ್ಲಿಕ್ ಆಯ್ತೊ ನನಗೊತ್ತಿಲ್ಲ ಅದು. ಹಾಗಾಗಿ ಜನಪ್ರಿಯ ಕಾದಂಬರಿ ಎಂಬ ಮೊಹರು ಆಗ್ಲೇ ಬಿತ್ತು. ನನ್ನ ಎಷ್ಟೋ ಜನ ಕೇಳಿದ್ದಾರೆ. ಲೇಖಕ, ಪತ್ರಕರ್ತ ಪಿ. ಲಂಕೇಶ್ ಒಮ್ಮೆ ಕೇಳಿದ್ರು. 'ಗಟ್ಟಿಯವರೆ ನಿಮ್ಮನ್ನ ಜನಪ್ರಿಯ ಅಂತ ಹೇಳ್ತಾರೆ, ಬೇಸರ ಆಗುವುದಿಲ್ವ.' ನನ್ನ ಏನಂತ ಕರೆದ್ರೂ ನನಗೆ ಬೇಸರ ಇಲ್ಲ. ನನಗೆ ಆ ಶಬ್ದದ ಅರ್ಥವೇ ಗೊತ್ತಿಲ್ಲ. ನಾನು ಬರೀತೇನೆ, ಜನರು ಅದನ್ನು ಓದ್ತಾರೆ. ಅವರು ಹೆಸರೇನಿಡ್ತಾರೆ ಅದರ ಅರ್ಥ ಏನು ಎಂಬುದರ ಅಗತ್ಯವೇ ನನಗಿಲ್ಲ. ಅವನು ಚೆನ್ನಾಗಿ ಚಪಾತಿ ಮಾಡ್ತಾನೆ ಅಂತೇಳಿದ್ರೆ ಏನು ಹೇಳಿದ ಹಾಗಾಯ್ತು. ಅಥವಾ ಚೆನ್ನಾಗಿಲ್ಲ ಅವನು ಮಾಡುವುದು ಅಂತ ಹೇಳಿದ್ರೆ ಚೆನ್ನಾಗಿಲ್ಲ ಅಷ್ಟೆ. ಬರವಣಿಗೆ ನಮ್ಮ ಒಳಗಿನಿಂದ ಬರುವಂಥಾದ್ದು. ನಮ್ಮ ಮನಸ್ಸಿನ ಒಳಗಿನಿಂದ ಬರುವಂಥಾದ್ದು. ಆನಂತರ ಒಂದು ಬಹಳ ದೊಡ್ಡ ಕ್ರಿಟಿಸಿಸಂ ಅಂದ್ರೆ ಇವರ ಕಾದಂಬರಿಗಳಲ್ಲಿ ಸೃಜನಶೀಲತೆ ಕಡಿಮೆ, ವೈಚಾರಿಕತೆ ಜಾಸ್ತಿ ಅಂತ. ಈ ಸೃಜನಶೀಲತೆ ಮತ್ತು ವೈಚಾರಿಕತೆ ನಡುವೆ ಒಂದು ಗೆರೆ ಎಳೆದುಕೊಂಡು, ಆ ಕಾಲದಲ್ಲಿ, ಸಾಹಿತ್ಯ ಅಕಾಡೆಮಿಯವರು ಎರಡು ರೀತಿಯಲ್ಲಿ ಪ್ರತ್ಯಪ್ರತ್ಯೇಕ ಪ್ರಶಸ್ತಿ ಕೊಡ್ತಿದ್ದರು. ನಾನು ಹೇಳಿದೆ ಏನದು, ಸೃಜನಶೀಲತೆ ಮತ್ತು ವೈಚಾರಿಕತೆ ನಡುವೆ ವ್ಯತ್ಯಾಸ ಏನು. ಎಲ್ಲಿ ಯಾವುದು